# ರಂಗಭೂಮಿ ಎಲ್ಲದನ್ನೂ ಕೊಟ್ಟಿದೆ

## ವಿವೇಕ್ ಸಿಂಹ
### ಸ್ಟಾರ್ ಸುವರ್ಣದ 'ಮತ್ತೆ ವಸಂತ'ದ ವಸಂತ

◆ **'ಮತ್ತೆ ವಸಂತ'ದಲ್ಲಿ ನಿಮ್ಮ ಪಾತ್ರ ಏನು?**

ರೌಡಿಯ ಪಾತ್ರ. ಆದರೆ ಅವನಿಗೂ ನೈತಿಕ ಮೌಲ್ಯಗಳಿವೆ. ಅವನಿಗೊಬ್ಬ ಸ್ನೇಹಿತ ಇರುತ್ತಾನೆ. ಅವನನ್ನು ಬೇರೆಯವರು ಸಾಕಿರುತ್ತಾರೆ. ಭಯ ಅನ್ನೋದೇ ವಸಂತನಿಗೆ ಇಲ್ಲ. ಒಂದು ರೀತಿಯಲ್ಲಿ ರಗಡ ಕ್ಯಾರೆಕ್ಟರ್. ಆತ ಕ್ರೂರಿಯಲ್ಲ.

◆ **ವಸಂತಕಾಲಕ್ಕೆ ಸರಿಯಾಗಿ ಬರ್ತಿದೆ ವಿಶೇಷ ಏನು?**

ತೀರಾ ಆಕಸ್ಮಿಕ. ಯೋಜನಾ ರಹಿತವಾಗಿ ಹೆಸರನ್ನು ಇಡಲಾಗಿದೆ. ನನಗೆ ಗೊತ್ತಿರುವ ಹಾಗೆ ಸಾಕಷ್ಟು ಹೆಸರುಗಳು ಹರಿದಾಡಿದವು. ಕೊನೆಯ ಹಂತದಲ್ಲಿ ಇದನ್ನು ನಾಮಕರಣ ಮಾಡಲಾಯಿತು. ನಿರ್ದೇಶಕ ಮಧುಸೂದನ್ ಈ ಹೆಸರನ್ನು ಇಟ್ಟರೆ ಹೇಗೆ ಅಂದರು. ಅದೇ ಅಂತಿಮವಾಯಿತು. ಅವರು ದಿಢೀರೆಂದು 'ಮತ್ತೆ ವಸಂತ' ಎಂದು ಇಟ್ಟರು. ಅದಾದ ಮೇಲೆ ವಸಂತ ಕಾಲ ಎಂದು ಗೊತ್ತಾಯಿತು. ಮಾರ್ಚ್ 2ರಿಂದ ಆರಂಭ ಆಗಿದೆ. ಹೊಸ ಧಾರಾವಾಹಿ ಜನ ಹೇಗೆ ತೆಗೆದುಕೊಳ್ಳುತ್ತಾರೆ ನೋಡಬೇಕು. ಚಿತ್ರೀಕರಣದ ಆರಂಭ ಪೂರ್ತಿ ಮೈಸೂರಿನಲ್ಲಿ ಆಗಿದೆ. ಸಾಂಸ್ಕೃತಿಕ ನಗರ ಎನ್ನುವ ಮೈಸೂರಿನ ಅನ್ವರ್ಥ ಧಾರಾವಾಹಿಯ ಹೂರಣದಲ್ಲಿಯೂ ಅಡಗಿದೆ.

◆ **ಒಂದು ಸಾಲಿನ ಕಥೆಯ ಸುತ್ತ ನೋಡಿದರೆ 'ಮತ್ತೆ ವಸಂತ'ದಲ್ಲಿ ಏನು ಕಾಣಿಸುತ್ತದೆ?**

ವಸಂತ– ಅಪರ್ಣಾ ನಾಯಕ– ನಾಯಕಿಯಾಗಿ ಕಥೆಯಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುತ್ತಾರೆ. ಇಬ್ಬರಿಗೂ ಪರಸ್ಪರ ಪರಿಚಯ ಆರಂಭದಲ್ಲಿ ಇರುವುದಿಲ್ಲ. ಯಾವುದೋ ವಿಚಿತ್ರ ಸಂದರ್ಭದಲ್ಲಿ ಅಪರ್ಣಾಳನ್ನು ನೋಡುತ್ತಾನೆ. ಅಪರ್ಣಾ ನ್ಯಾಯದಪರ ನಿಲ್ಲುವ ಹುಡುಗಿ. ಹಾಗೆಂದು ಅವನ ವಿರುದ್ಧ ನಿಲುವು ಇರುವವಳು ಅಲ್ಲ. ವಸಂತ ಎನ್ನುವ ಹೆಸರು ಕೇಳಿದ ತಕ್ಷಣ ಅವಳಿಗೆ ಏನೋ ನೆನಪಾಗುತ್ತದೆ. ಆ ಹೆಸರಿನ ಹಿಂದೆ ಅವಳ ನೆನಪಿನ ಸುರುಳಿ ಬಿಚ್ಚಿಕೊಳ್ಳುತ್ತದೆ. ಅದೇ ಈ ಕಥೆಯ ರಹಸ್ಯ. ಅದನ್ನು ನೋಡುವುದರಲ್ಲಿ ಸ್ವಾರಸ್ಯ ಇದೆ. ಮುಂದೆ ಅವರಿಬ್ಬರು ಮುಖಾಮುಖಿ ಆಗುತ್ತಾರೆ. ಪ್ರೀತಿ ಉಂಟಾಗುತ್ತದೆ. ಅದರ ನಡುವೆ ಇನ್ನೇನೋ ಆಗಬಹುದು.

◆ **ನಿಮ್ಮ ಬಣ್ಣದ ಹಾದಿಯ ಪಯಣವನ್ನು ಹೇಳಿ?**

ಸೊನ್ನೆಯಿಂದಲೇ ಆರಂಭವಾಗಿದ್ದ, ರಂಗಭೂಮಿಗೆ ಬರುವ ಮುಂಚೆ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಕನಸು ಇತ್ತು. ಅದು ಆರಂಭಿಕ ಕಾಲ ಮೊದಲು ಕಾಲೇಜು ದಿನಗಳಲ್ಲಿ ಜನಪದ ಕಲೆಯನ್ನು ಪ್ರದರ್ಶಿಸುತ್ತಿದ್ದೆವು. ಆಗಲೇ ಕಂಸಾಳೆ, ಡೊಳ್ಳುಕುಣಿತ, ವೀರಗಾಸೆಯನ್ನು ಮಾಡುತ್ತಿದ್ದೆ. ನಂತರ ರಂಗಭೂಮಿಯಲ್ಲಿ ಸ್ವಲ್ಪ ದಿನ ನೆಲೆಕಂಡುಕೊಂಡಿದ್ದೆ. ಅಲ್ಲೇ ಅಭಿನಯದ ಮೂಲತತ್ವವನ್ನು ಕಲಿತಿದ್ದೇನೆ. ಶಾಲೆಯಲ್ಲಿ ಓದುವಾಗಲೇ ನನಗೆ ಸಿನಿಮಾದಲ್ಲಿ ನಟಿಸಬೇಕು ಎನ್ನುವ ಕನಸು ಇತ್ತು. ಆದರೆ ರಂಗಭೂಮಿಯೊಳಗೆ ಹೊಕ್ಕನಂತರ ಇಲ್ಲೇ ನೆಲೆಗೊಳ್ಳಬೇಕು ಎಂದುಕೊಂಡಿದ್ದೆ. ನನ್ನ ಜೀವನ ರಂಗ ವೇದಿಕೆಗೆ ಸೀಮಿತವಾಗಿತ್ತು. ರವಿಕಿರಣ್ ನನಗೆ ಒಮ್ಮೆ ಫೋನ್ ಮಾಡಿ ಒಂದು ಪಾತ್ರ ಇದೆ ಮಾಡ್ತೀಯಾ ಎಂದು ಕರೆದರು. ನನ್ನ ನಂಬರ್ ಹೇಗೆ ಸಿಗ್ತು ಅನ್ನೋದು ಈವರೆಗೂ ಗೊತ್ತಿಲ್ಲ ಅವರ ಕರೆಯಮೇರೆಗೆ ಕಲರ್ಸ್ ಕನ್ನಡದ 'ಸೌಭಾಗ್ಯವತಿ'ಯಲ್ಲಿ ನಟಿಸಿದೆ. ಅದಾದ ಮೇಲೆ ಝೀ ಕನ್ನಡದಲ್ಲಿ 'ಜನುಮದ ಜೋಡಿ' 'ಡಾನ್ಸ್ ಕರ್ನಾಟಕ ಡಾನ್ಸ್' 'ಮಹಾದೇವಿ' ಅಷ್ಟರ ಮಧ್ಯದಲ್ಲಿ ಸಿನಿಮಾ ಮಾಡಿ ಈಗ ಸ್ಟಾರ್ ಸುವರ್ಣಕ್ಕೆ ಬಂದಿದ್ದೇನೆ.

◆ **ರಂಗಭೂಮಿಯ ನಿಮ್ಮ ಅನುಭವ ಹೇಳುವುದಾದರೆ...**

ರಂಗಭೂಮಿ ಅಂದರೆ ಶಿಸ್ತು. ಯಾವುದೇ ಅಂಜಿಕೆ ಇಲ್ಲದೆ ಎಂತಹ ಪಾತ್ರವೂ ನಾವಾಗಿ ಕಾಣಿಸಿಕೊಳ್ಳಲು ಸಾಧ್ಯ ಆಗುತ್ತೆ, ಎನ್ನುವುದಾದರೆ ಅದು ರಂಗಭೂಮಿಯ ಕೊಡುಗೆ. ಹವ್ಯಾಸಿ ರಂಗಚಟುವಟಿಕೆ ಮಾಡುತ್ತಾ ಇದ್ದೆ. ಮೈಸೂರು ರಂಗಾಯಣದಲ್ಲಿ ಡಿಪ್ಲೊಮಾ ಮಾಡಿದೆ. ನಂತರ ಮತ್ತೆ ರಂಗಭೂಮಿಯಲ್ಲೇ ನನ್ನ ಕೆಲಸ ಮುಂದುವರಿಸಿದೆ. ಒಬ್ಬ ನಟ ರೂಪಗೊಳ್ಳಲು ರಂಗಭೂಮಿ ಸಹಕಾರಿ ಎಂದು ನಾನು ಅಂದುಕೊಂಡಿದ್ದೇನೆ. ನಟನೆ ಅಂದರೆ ಇದು. ವೇದಿಕೆಯಲ್ಲಿ ಹೀಗೆ ಇರಬೇಕು. ನಮ್ಮ ಸಾಮರ್ಥ್ಯ ಹೇಗಿರಬೇಕು ಎನ್ನುವುದನ್ನು ರಂಗಭೂಮಿ ಕಲಿಸುತ್ತದೆ. ಮಾತ್ರವಲ್ಲ, ಭಾಷಾ ಶುದ್ಧತೆಯನ್ನು ಕಲಿಸುತ್ತದೆ. ಬೌದ್ಧಿಕ– ಮಾನಸಿಕ– ದೈಹಿಕ ವಿಕಾಸ ಅಲ್ಲಿ ಆಗುತ್ತದೆ. ಅದನ್ನು ಮೀರಿ ಬೇರೆ ಇನ್ನೇನೂ ಇಲ್ಲ. ನನ್ನ ಪ್ರಕಾರ ಅದರ ನಂತರವೇ ಟೀವಿ– ಸಿನಿಮಾ. ಇಲ್ಲಿ ಸಂಪಾದನೆಯ ಕಾರಣಕ್ಕೆ ಬರಬೇಕು. ಮಾನಸಿಕ ತೃಪ್ತಿ ರಂಗಭೂಮಿಯಷ್ಟು ಇಲ್ಲಿ ಸಿಗುವುದಿಲ್ಲ. ತೆರೆಯಲ್ಲಾದರೆ ನಾವು ಬೇಗ ಜನಪ್ರಿಯತೆ ಗಳಿಸಬಹುದು. ನಾನು ಆಕಸ್ಮಿಕವಾಗಿ ತೆರೆಗೆ ಬಂದಿದ್ದೇನೆ. ಈಗ ಇಲ್ಲೇ ಇರಬೇಕು. ಇದನ್ನೂ ನಾನು ಕಲಿತಿದ್ದು ರಂಗಭೂಮಿಯಿಂದ. ರಂಗಭೂಮಿ ಶಿಸ್ತು ಕಲಿಸುತ್ತದೆ.

◆ **ರಂಗಭೂಮಿ ಆಕರ್ಷಣೆ ನಿಮ್ಮಲ್ಲಿ ಹೇಗೆ ಮೂಡಿತು?**

ಬಾಲ್ಯದಲ್ಲಿ ರಂಗಭೂಮಿ ಅಂತ ಗೊತ್ತಿರಲಿಲ್ಲ. ಮೊದಲಿನಿಂದಲೂ ನಾಯಕನಂತೆ ಬಿಂಬಿತನಾಗಬೇಕು ಎನ್ನುವ ಯೋಚನೆ ನನ್ನದು. ಡಾನ್ಸ್ ಮಾಡಿದರೆ ನಾನು ಕೇಂದ್ರದಲ್ಲಿ ನಿಂತಿರಬೇಕು. ಶಾಲೆಯಲ್ಲಿ ಕೃಷ್ಣನ ಕುರಿತ ಒಂದು ನಾಟಕ ಅದರಲ್ಲಿ ನಾನೇ ಕೃಷ್ಣ ಆಗಬೇಕು ಇಲ್ಲದಿದ್ದರೆ ನಾಟಕವನ್ನೇ ಮಾಡುವುದಿಲ್ಲ ಎನ್ನುವ ಮನಃಸ್ಥಿತಿ ನನ್ನದಾಗಿತ್ತು. ಡಾನ್ಸ್ ಮಾಡಿದರೆ ಆಗ ಎಷ್ಟು ಚೆನ್ನಾಗಿ ಮಾಡ್ತೀಯಾ ಅಂದು ಜನರೂ ಹೇಳುತ್ತಿದ್ದರು. ಅದಕ್ಕೆಲ್ಲ ನನ್ನ ಅಪ್ಪ ತುಂಬ ಬೆಂಬಲ ಕೊಡುತ್ತಿದ್ದರು. ಎಲ್ಲಾದರೂ ರಸಮಂಜರಿ ಕಾರ್ಯಕ್ರಮ ನಡೆಯುತ್ತಿದ್ದರೆ ವೇದಿಕೆಗೆ ಡಾನ್ಸ್ ಮಾಡಲು ಬಿಡ್ತಾ ಇದ್ದರು. ಪಿಯು ಓದುವಾಗ ರಂಗಭೂಮಿ ಮೋಹ ಬೆಳೆಯಿತು.

ಕ್ರಮಣ ಓದಿನ ಆಸಕ್ತಿ ಕಡಿಮೆ ಆಗಿ ರಂಗ ಚಟುವಟಿಕೆ ಹೆಚ್ಚಾಯಿತು. ರಂಗಾಯಣದಲ್ಲಿ 'ಹರಿಶ್ಚಂದ್ರ ಕಾವ್ಯ', 'ಪಾತರಗಿತ್ತಿಪಕ್ಕ' ಮಾಡಿದ್ದೆವು. ಹರಿಶ್ಚಂದ್ರ ಕಾವ್ಯದಲ್ಲಿ ಸಿಕ್ಕಾಪಟ್ಟೆ ಕಲಿಯಲು ಸಾಧ್ಯವಾಯಿತು. ಅಲ್ಲಿನ ಭಾಷೆ ನನಗೊಂದು ತಳಹದಿಯನ್ನು ಹಾಕಿತು. ಮಾದರಿ ಮಾದಯ್ಯ, ಕ್ರಾಂತಿ, ಹೇರಾಮ್ ಗಾಂಧಿ ಗೋಡ್ಸೆ, ಭೂಮಿ ಅನೇಕ ನಾಟಕಗಳ ಒಟ್ಟು 5000 ಶೋಗಳನ್ನು ಮಾಡಿದ್ದೇನೆ.



■ ರಾಘವೇಂದ್ರ ಕೆ.